24.	ಸ.ಹಿ.ಪ್ರಾ.ಶಾ. ನಿಲೋಗು
25.	ಸ.ಹಿ.ಪ್ರಾ.ಶಾ. ಕಳಕೊಂಡ

ಪ್ರೌಢ ಶಾಲೆಗಳು :

ಕ್ರ. ಸಂ	ತಾಲ್ಲೂಕು	ಪ್ರೌಢ ಶಾಲೆಯ ಹೆಸರು
1.	ಸವಣೂರು	ಸ.ಪ್ರೌ.ಶಾ. ಕಾರಡಗಿ
2.		ಸ.ಪ್ರೌ.ಶಾ. ಮಂತ್ರೋಡಿ
3.		ಸ.ಪ್ರೌ.ಶಾ. ಚಳಸೂರು
4.		ಸ.ಪ್ರೌ.ಶಾ. ಹಿರೆಬೆಂಡಿಗೇರಿ
5	ಶಿಗ್ಗಾಂವ	ಸ.ಪ್ರೌ.ಶಾ. ಬನ್ನೂರ
6.		ಸ.ಪ್ರೌ.ಶಾ. ನೀರಲಗಿ

2044 (2435) ಡಾ॥ ಸುಧಾಕರ್ ಎಂ.ಪಿ. (ಚಿಂತಾಮಣಿ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ತಾಲ್ಲೂಕಿನ ಬಾಲಕರ ಹಾಗೂ ಬಾಲಕಿಯರ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಬೋಧಕರು ಹಾಗೂ ಬೋಧಕೇತರ ಸಂಖ್ಯೆ ಎಷ್ಟು; (ಹುದ್ದೆವಾರು, ಕಾಲೇಜುವಾರು ವಿವರ ನೀಡುವುದು);

ಆ) ಹುದ್ದೆಗಳು ಖಾಲಿ ಇರುವುದರಿಂದ ವಿದ್ಯಾರ್ಥಿಗಳಿಗೆ ವ್ಯಾಸಂಗ ಮಾಡಲು ತೊಂದರೆಯಾಗುತ್ತಿರುವುದು ನಿಜವಲ್ಲವೆ;

ಇ) ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಈ) ಈ ಹುದ್ದೆಗಳನ್ನು ಯಾವಾಗ ತುಂಬಲಾಗುವುದು?

ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ)

ಕ್ರ.ಸಂ	ಕಾಲೇಜು	ಖಾಲಿ ಹುದ್ದೆಗಳ ಸಂಖ್ಯೆ		
		ಪ್ರಿನ್ಸಿಪಾಲರು	ಉಪನ್ಯಾಸಕರು	ಬೋಧಕೇತರರು
1.	ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜು ಚಿಂತಾಮಣಿ, ಕೋಲಾರ (ಜಿ)	ಖಾಲಿ ಇಲ್ಲ	10	01

2.	ಸರ್ಕಾರಿ ಪದವಿ ಪೂರ್ವ ಕಾಲೇಜು, ಬಟ್ಲಹಳ್ಳಿ, ಚಿಂತಾಮಣಿ ತಾ. ಕೋಲಾರ ಜಿಲ್ಲೆ	ಖಾಲಿ ಇಲ್ಲ	04	ಹುದ್ದೆ ಮಂಜೂರು ಆಗಿಲ್ಲ
3.	ಸರ್ಕಾರಿ ಪದವಿ ಪೂರ್ವ ಕಾಲೇಜು, ಕೈವಾರ, ಚಿಂತಾಮಣಿ ತಾ. ಕೋಲಾರ ಜಿಲ್ಲೆ	ಖಾಲಿ ಇಲ್ಲ	04	ಹುದ್ದೆ ಮಂಜೂರು ಆಗಿಲ್ಲ
4.	ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು, ಚಿಂತಾಮಣಿ, ಕೋಲಾರ ಜಿಲ್ಲೆ	ಖಾಲಿ ಇಲ್ಲ	14	ಹುದ್ದೆ ಮಂಜೂರು ಆಗಿಲ್ಲ
5.	ಸರ್ಕಾರಿ ಪದವಿ ಪೂರ್ವ ಕಾಲೇಜು, ತಲಗವಾರ, ಚಿಂತಾಮಣಿ ತಾ. ಕೋಲಾರ ಜಿಲ್ಲೆ	ಖಾಲಿ ಇಲ್ಲ	04	ಹುದ್ದೆ ಮಂಜೂರು ಆಗಿಲ್ಲ

ಆ) ಕಡಿಮೆ ಕಾರ್ಯಭಾರವಿರುವ ಕಾಲೇಜಿನ ಉಪನ್ಯಾಸಕರನ್ನು ಕಾರ್ಯಭಾರವಿರುವ ಕಾಲೇಜುಗಳಿಗೆ ವಾರದಲ್ಲಿ 3 ದಿನಗಳ ನಿಯೋಜನೆ ಮಾಡಿ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲಾಗಿದೆ.

ಇ, ಈ) ಖಾಲಿ ಇರುವ ಉದ್ದೆಗಳನ್ನು ತುಂಬಲು 803 ಉಪನ್ಯಾಸಕರ ಹುದ್ದೆಗಳನ್ನು ನೇರ ನೇಮಕಾತಿಗೆ ಪ್ರಕಟನೆ ನೀಡಲು ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಹಾಗೂ ಉಳಿದ ಹುದ್ದೆಗಳಿಗೆ ಪ್ರೌಢ ಶಾಲಾ ಸಹ ಶಿಕ್ಷಕರುಗಳಿಗೆ ಉಪನ್ಯಾಸಕರ ಹುದ್ದೆಗೆ ಬಡ್ತಿ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ.

2045 (2436) ಡಾ॥ ಎಂ.ಸಿ. ಸುಧಾಕರ್ (ಚಿಂತಾಮಣಿ) :– ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ನಗರದಲ್ಲಿರುವ ಬಾಲಕರ ಹಾಗೂ ಮಹಿಳೆಯರ ಕಾಲೇಜುಗಳಲ್ಲಿ (ಪ್ರಥಮ ದರ್ಜೆ ಕಾಲೇಜ್) ಬೋಧಕರು ಹಾಗೂ ಬೋಧಕೇತರ ಹುದ್ದೆಗಳು ಖಾಲಿ